## 2. ಉನ್ನತೀಕರಿಸಿದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ.ಪುರಪ್ಪೇಮನೆ.

ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆಯ ದೃಷ್ಟಿಕೋನವನ್ನಿಟ್ಟುಕೊಂಡು ಕಾರ್ಯನಿರ್ವಹಿಸುತ್ತಿರುವ ಗ್ರಾಮೀಣ ವಿದ್ಯಾರ್ಥಿಗಳ ಹೆಮ್ಮೆಯ ಸಾಧನೆಯಿಂದ ಇಡೀ ಹೊಸನಗರ ತಾಲೂಕಿನಲ್ಲಿ ಅತ್ಯುತ್ತಮ ಹೆಸರನ್ನು ಪಡೆದಿರುವ ಶಾಲೆಗಳಲ್ಲಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಪುರಪ್ಪೇಮನೆ ಕೂಡ ಒಂದು.

2017–18 ನೇ ಶೈಕ್ಷಣಿಕ ವರ್ಷದಲ್ಲಿ 1 ರಿಂದ 8 ನೇ ತರಗತಿಯವರೆಗೆ ಒಟ್ಟು 70 ವಿದ್ಯಾರ್ಥಿಗಳಿದ್ದು "ಪ್ರತಿಭಾ ಕಾರಂಜಿ", ಕ್ರೀಡಾಕೂಟ, ಭಗವದ್ಗೀತಾ ಕಂಠಪಾಠ ಸ್ಪರ್ಧೆ, N.M.M.S ನಂತಹ ಸ್ಪರ್ಧಾತ್ಮಕ ಪರೀಕ್ಷೆ, INSPIRE AWARD ನಂತಹ ರಾಷ್ಟ್ರಮಟ್ಟದ ಕಾರ್ಯಕ್ರಮಗಳಲ್ಲಿ ಎರಡು ಬಾರಿ ನವದೆಹಲಿಯಲ್ಲಿ ಭಾಗವಹಿಸಿರುವುದು ಗ್ರಾಮೀಣ ಶಾಲೆಯ ಹೆಮ್ಮೆಯ ಸಾಧನೆಗೆ ಹಿಡಿದ ಕೈಗನ್ನಡಿಯಾಗಿದೆ.

**1)ಪ್ರತಿಭಾ ಕಾರಂಜಿ:–** ಕಿರಿಯ ಹಾಗೂ ಹಿರಿಯ ಪ್ರಾಥಮಿಕ ಶಾಲಾ ವಿದ್ಯಾರ್ಥಿಗಳ ತಾಲೂಕು ಹಾಗೂ ಜಿಲ್ಲಾ ಮಟ್ಟದ ಪ್ರತಿಭಾ ಕಾರಂಜಿ ಸ್ಪರ್ಧೆಯಲ್ಲಿ ವೈಯಕ್ತಿಕ ಹಾಗೂ ಸಾಮೂಹಿಕ ವಿಭಾಗದಲ್ಲಿ ಪ್ರಶಸ್ತಿಗಳನ್ನು ಪಡೆದಿರುವುದು ಶಾಲೆಯ ಸಾಂಸ್ಕೃತಿಕ ಹಾಗೂ ಕಲಾತ್ಮಕ ದೃಷ್ಟಿಕೋನವನ್ನು ವಿದ್ಯಾರ್ಥಿಗಳ ಪ್ರತಿಭೆಯನ್ನು ಅನಾವರಣಗೊಳಿಸುತ್ತದೆ.

**2)ಕ್ರೀಡಾ ಕೂಟ:–** ಕ್ರೀಡಾಕೂಟಗಳಲ್ಲಿ ವೈಯಕ್ತಿಕ ವಿಭಾಗದಲ್ಲಿ ಅತ್ಯುತ್ತಮ ಸಾಧನೆಯೊಂದಿಗೆ ಜಿಲ್ಲಾ ಮಟ್ಟವನ್ನು ಪ್ರತಿನಿಧಿಸಿರುವುದು ಹೆಮ್ಮೆಯ ವಿಷಯವಾಗಿರುತ್ತದೆ.

**3)ಭಗವದ್ಗೀತಾ ಕಂಠಪಾಠ ಸ್ಪರ್ಧೆ:–** ವಿದ್ಯಾರ್ಥಿಗಳಲ್ಲಿ ಅತ್ಯುತ್ತಮ ಮೌಲ್ಯಗಳು, ಸಂಸ್ಕೃತಿ ಮೈಗೂಡಬೇಕೆಂಬ ದೃಷ್ಟಿಯಿಂದ ಪ್ರತಿದಿನ ಶಾಲೆಯಲ್ಲಿ ಪ್ರಾರ್ಥನಾ ಸಮಯದಲ್ಲಿ ಭಗವದ್ಗೀತಾ ಪಠಣ ಹಾಗೂ ಪ್ರತಿವರ್ಷ 2009 ನೇ ಶೈಕ್ಷಣಿಕ ಸಾಲಿನಿಂದ ಈವರೆಗೂ ಸಾಗರದ ಶಿವಗೋಪಾಲಕೃಷ್ಣ ದೇವಸ್ಥಾನದಲ್ಲಿ ಡಿಸೆಂಬರ್ ತಿಂಗಳ ಗೀತಾ ಜಯಂತಿಯಂದು ಭಗವದ್ಗೀತಾ ಕಂಠಪಾಠ ಸ್ಪರ್ಧೆಯಲ್ಲಿ ವಿದ್ಯಾರ್ಥಿಗಳು ಭಾಗವಹಿಸಿ ಪ್ರತಿವರ್ಷ ಅತೀ ಹೆಚ್ಚಿನ ಬಹುಮಾನಗಳನ್ನು ಪಡೆದಿರುವುದು ಪುರಪ್ಪೇಮನೆ ಗ್ರಾಮದ ಹೆಮ್ಮೆ ಹೆಚ್ಚಿಸಿರುವುದು ಶಾಲೆಯ ಮೌಲ್ಯಯುತ ಪರಿಸರದ ಸೂಚಕವಾಗಿರುತ್ತದೆ.

**4) N.M.M.S ರಾಜ್ಯಮಟ್ಟದ ಸ್ಪರ್ಧಾತ್ಮಕ ಪರೀಕ್ಷೆ:–** "ಇಂದಿನ ಯುಗ–ಸ್ಪರ್ಧಾತ್ಮಕ ಯುಗ" ವಿದ್ಯಾರ್ಥಿಗಳ ಪ್ರತಿಭೆಗೆ ಅನುಗುಣವಾಗಿ ವಿದ್ಯಾರ್ಥಿವೇತನ ನೀಡುವ ರಾಜ್ಯಮಟ್ಟದ N.M.M.S ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ 8 ನೇ ತರಗತಿ ವಿದ್ಯಾರ್ಥಿಗಳು ಅತ್ಯುತ್ತಮ ಸಾಧನೆ ಮಾಡಿರುತ್ತಾರೆ. 2010 ನೇ ಶೈಕ್ಷಣಿಕ ವರ್ಷದಿಂದ ಈ ವರೆಗೂ ಒಟ್ಟು 24 ವಿದ್ಯಾರ್ಥಿಗಳು ಆಯ್ಕೆಯಾಗಿದ್ದು ಪ್ರತಿ ವಿದ್ಯಾರ್ಥಿಯೂ ನಾಲ್ಕು ವರ್ಷಗಳ ಅವಧಿಯ ತನಕ ಪ್ರತಿವರ್ಷ 6000/ದಂತೆ ಒಟ್ಟು 24,000/ವಿದ್ಯಾರ್ಥಿ ವೇತನ ಪಡೆಯುತ್ತಿರುವುದು ಶ್ಲಾಘನೀಯ ವಿಚಾರವಾಗಿದೆ. 2016–17 ಶೈಕ್ಷಣಿಕ ಅವಧಿಯವರೆಗೆ ಸರಿಸುಮಾರು 6 ಲಕ್ಷ ರೂಗಳ ವಿದ್ಯಾರ್ಥಿವೇತನಕ್ಕೆ ಅರ್ಹರಾಗಿರುವುದು ಶಾಲೆಯ ಶಿಕ್ಷಕರ ಶ್ರಮ ಹಾಗೂ ವಿದ್ಯಾರ್ಥಿಗಳ ಪರಿಶ್ರಮಕ್ಕೆ ಸಂದ ಪ್ರತಿಫಲವಾಗಿದೆ. **2017–18 ನೇ ಶೈಕ್ಷಣಿಕ ವರ್ಷದಲ್ಲಿ ಶಿವಮೊಗ್ಗ ಜಿಲ್ಲೆಯಲ್ಲಿ ಒಟ್ಟು 3475 ವಿದ್ಯಾರ್ಥಿಗಳು N.M.M.S ಪರೀಕ್ಷೆ ಬರೆದಿದ್ದು ನಮ್ಮ ಶಾಲೆಯ ವಿದ್ಯಾರ್ಥಿನಿ ಕು॥ ನವ್ಯಶ್ರೀ. ಎನ್ ಶಿವಮೊಗ್ಗ ಜಿಲ್ಲೆಗೆ ಪ್ರಥಮ ರ್‍ಯಾಂಕ್ ಪಡೆದಿರುವುದು ಅತ್ಯಂತ ಹೆಮ್ಮೆಯ ಸಾಧನೆಯಾಗಿರುತ್ತದೆ.**

**5) INSPIRE AWARD ರಾಷ್ಟ್ರಮಟ್ಟದ ವಿಜ್ಞಾನ ವಸ್ತು ಪ್ರದರ್ಶನ:–** ಇತ್ತೀಚಿನ ದಿನಗಳಲ್ಲಿ ವೈಜ್ಞಾನಿಕ ಕ್ಷೇತ್ರಗಳಲ್ಲಿ ಕ್ರಾಂತಿಕಾರಿ ಬದಲಾವಣೆಗಳಾಗುತ್ತಿರುವ ನಿಟ್ಟಿನಲ್ಲಿ ಡಾ॥ಎ.ಪಿ.ಜೆ. ಅಬ್ದುಲ್‌ಕಲಾಂ ರವರ ಆಶಯದಂತೆ ನಡೆಯುತ್ತಿರುವ INSPIRE AWARD ನಂತಹ ರಾಷ್ಟ್ರಮಟ್ಟದ ವಿಜ್ಞಾನ ವಸ್ತು ಪ್ರದರ್ಶನದಲ್ಲಿ 2012–13 ನೇ

ಶೈಕ್ಷಣಿಕ ವರ್ಷದಲ್ಲಿ ಪ್ರಥಮ ಬಾರಿಗೆ ನಮ್ಮ ಶಾಲೆಯ ವಿದ್ಯಾರ್ಥಿನಿ ಕು||ನೂತನ ಬಿ.ಸಿ D/O ಶ್ರೀ ಚಂದ್ರಶೇಖರ್ ಇವರು ದೆಹಲಿಯಲ್ಲಿ ನಡೆದ ರಾಷ್ಟ್ರಮಟ್ಟದ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದು ಇಡೀ ಹೊಸನಗರ ತಾಲೂಕಿಗೆ ಕೀರ್ತಿ ತಂದಿರುತ್ತಾರೆ.

ನಂತರ ಪುನಃ 2014–15 ನೇ ಶೈಕ್ಷಣಿಕ ವರ್ಷದಲ್ಲಿ ಇನ್ನೊಮ್ಮೆ ಇದೇ ಕಾರ್ಯಕ್ರಮದಡಿಯಲ್ಲಿ ಏಳನೇ ತರಗತಿ ವಿದ್ಯಾರ್ಥಿನಿ ಕು||ಶ್ರದ್ಧಾ ಪಿ.ಎನ್ D/O ಶ್ರೀ ನಾಗರಾಜ ಇವಳು ರಾಷ್ಟ್ರಮಟ್ಟಕ್ಕೆ ನವದೆಹಲಿಯಲ್ಲಿ ಭಾಗವಹಿಸಿ ಶಾಲೆಯ ಪುರಪ್ಪೇಮನೆ ಗ್ರಾಮದ ಹಾಗೂ ಹೊಸನಗರ ತಾಲೂಕಿನ ಕೀರ್ತಿಯನ್ನು ದುಪ್ಪಟ್ಟುಗೊಳಿಸಿರುವುದು ಅತ್ಯಂತ ಹೆಮ್ಮೆಯ ವಿಚಾರವಾಗಿದ್ದು ಗ್ರಾಮೀಣ ಪ್ರತಿಭೆಗಳ, ಮುಖ್ಯ ಶಿಕ್ಷಕರ ಹಾಗೂ ಶಿಕ್ಷಕರ ಪರಿಶ್ರಮದ ಫಲವಾಗಿದೆ.

**6) SMART CLASS:-** ಖಾಸಗಿ ಸಹಭಾಗಿತ್ವದಲ್ಲಿ 83,000 ರೂ ಮೊತ್ತದ SMART CLASS ಅನುಷ್ಠಾನಗೊಳಿಸಿದ್ದು ವಿದ್ಯಾರ್ಥಿಗಳಿಗೆ ಅತ್ಯುತ್ತಮ ಗುಣಮಟ್ಟದ ಪಾಠ ಪ್ರವಚನ ನಡೆಸಲಾಗುತ್ತಿದೆ.

**7) ನೀರಿನ ಶುದ್ಧೀಕರಣ ಘಟಕ:–** ಉತ್ತಮ ಕುಡಿಯುವ ನೀರಿನ ಪೂರೈಕೆಗಾಗಿ ದಾನಿಗಳಿಂದ ಪಡೆದ 25,000 ರೂ ಗಳ ನೀರಿನ ಶುದ್ಧೀಕರಣ ಘಟಕವನ್ನು ಶಾಲೆಯಲ್ಲಿ ಅಳವಡಿಸಲಾಗಿದೆ

ನಮ್ಮ ಶಾಲೆ ಗ್ರಾಮೀಣ ಪ್ರದೇಶದಲ್ಲಿದ್ದು ಆಗಾಗ್ಗೆ ವಿದ್ಯುತ್ ಕಡಿತವಾಗುವ ಹಿನ್ನೆಲೆಯಲ್ಲಿ ದಾನಿಗಳಿಂದ ಯು.ಪಿ.ಎಸ್ (25,000)ಅನ್ನು ಶಾಲೆಯಲ್ಲಿ ಅಳವಡಿಸಿದ್ದು ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ನೀಡುವಲ್ಲಿ ಸಮುದಾಯದ ಸಹಭಾಗಿತ್ವವನ್ನು ಪಡೆಯಲಾಗಿದೆ.

**8) ನಮ್ಮ ಶಾಲೆಯ ಹೆಮ್ಮೆಯ ದಾನಿಗಳು:–** ದಾನಿಗಳ ಸಹಾಯದಿಂದ ಶಾಶ್ವತ ನಿಧಿಯನ್ನು ಸ್ಥಾಪಿಸಿದ್ದು ಪ್ರತಿವರ್ಷ ಅದರ ಬಡ್ಡಿ ಹಣದಿಂದ 6 ಮತ್ತು 7 ನೇ ತರಗತಿ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಗೌರವಿಸಲಾಗುತ್ತಿದೆ.ಇದರಿಂದ ವಿದ್ಯಾರ್ಥಿಗಳಲ್ಲಿ ಸ್ಪರ್ಧಾ ಮನೋಭಾವ ಮೂಡಿ ಬಂದಿರುತ್ತದೆ.

| | | | |
|---|---|---|---|
| ದಾನಿಗಳು (ಶ್ರಮ, ಸಮಯ, ಧನ, ಜ್ಞಾನ ನೀಡಿದವರು | SMART CLASS | ಸೆಲ್ಕೋ ಸಂಸ್ಥೆ ಬೆಂಗಳೂರು ಹಾಗೂ ಶ್ರೀ ಎ.ಎನ್ ಮೃತ್ಯುಂಜಯ್ ಗ್ರಾಮ ಪಂಚಾಯತ್ ಸದಸ್ಯರು ಹಾಗೂ ಗ್ರಾಮಸ್ಥರು.ಪುರಪ್ಪೇಮನೆ. | 83,000/– |
| | ಶಾಶ್ವತ ನಿಧಿ. | ಶ್ರೀ ನಾರಾಯಣರಾವ್. ಪುರಪ್ಪೇಮನೆ<br>ಶ್ರೀಯುತ ಕೃಷ್ಣಮೂರ್ತಿ.ಎಂ.ಪಿ ಪುರಪ್ಪೇಮನೆ. | 10,101/–<br>10,000/– |
| | WATER FILTER | ಶ್ರೀ ಮಂಜುನಾಥ್ ಭಟ್. ಪುರಪ್ಪೇಮನೆ. | 25,000/– |
| | U.P.S | ಶ್ರೀ ಮಂಜುನಾಥ್ ಭಟ್. ಪುರಪ್ಪೇಮನೆ. | 25000/– |

ಹೀಗೆ ಸಾಂಸ್ಕೃತಿಕ, ಆಧ್ಯಾತ್ಮಿಕ (ಮೌಲ್ಯಯುತ) ಸ್ಪರ್ಧಾತ್ಮಕ ಹಾಗೂ ವೈಜ್ಞಾನಿಕ ರಂಗಗಳಲ್ಲಿ ವಿದ್ಯಾರ್ಥಿಗಳನ್ನು ಸಜ್ಜುಗೊಳಿಸುತ್ತಿರುವ ಹಾಗೂ ಉತ್ತಮ ದಾನಿಗಳನ್ನು ಹೊಂದಿರುವ “ನಮ್ಮ ಶಾಲೆ–ಗ್ರಾಮದ ಹೆಮ್ಮೆಯ ಶಾಲೆ”.







3rd National Level Exhibition & Project Competition 2013

OCTOBER 8-10

Pragati Maidan, New Delhi

inspire

Government of India
Ministry of Science and Technology
Department of Science and Technology

Certificate of Participation

The participation of Nuthana B C son/daughter of Chandrashekar B S of Class 8 of GHPS PURAPPEMANE HOSANAGARA, SHIMOGA in the National Level Exhibition and Project Competitions 2013, held at New Delhi during 8-10 October, 2013 is certified with best wishes for a rewarding experience with Science.

Dr. Inder Jit Singh, IAS
Joint Secretary
Department of Science and Technology

Dr. T. Ramasami
Secretary
Department of Science and Technology







Government of India
Ministry of Science and Technology
Department of Science and Technology

5th National Level
Exhibition & Project Competition
December 06-07, 2015, IIT Delhi

inspire

CERTIFICATE OF PARTICIPATION

This is to certify that Shraddha P N of class 7 of GHPS Purappemane, Shivamogga, Karnataka participated in the 5th National Level Exhibition and Project Competition 2015 of INSPIRE Awards, held at IIT, New Delhi during 06-07 December, 2015.

Anita Chauhan
Joint Secretary
Department of Science and Technology

Prof. Ashutosh Sharma
Secretary
Department of Science and Technology